ಎಂ.ವಿ.ಸಿ. 1032/2022 ಪಿ.ಡಬ್ಲ್ಯೂ: 1

<u>ಇಂದು ದಿ:30.01.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:</u>

ಅಪಘಾತವಾದಾಗ ನನ್ನ ಗಂಡ ಪುಟ್ಟಸ್ವಾಮಿಶೆಟ್ಟರ ಜೊತೆ ಬುಲೆರೊ ವಾಹನದಲ್ಲಿ ಹೋಗುತ್ತಿದ್ದರು. ಅಪಘಾತವಾಗಲು ಪುಟ್ಟಸ್ವಾಮಿಯವರ ತಪ್ಪು ಎಂದರೆ ಸರಿಯಲ್ಲ. ಅಪಘಾತವು ರಸ್ತೆ ಮಧ್ಯಭಾಗದಲ್ಲಿ ಆಗಿತ್ತು ಎಂದರೆ ಸರಿ. ಅಪಘಾತವನ್ನು ನಾನು ನೋಡಿದ್ದೇನೆ. ಅಪಘಾತವಾದಾಗ ನಾನು ಊರಿನಲ್ಲಿ ಇದ್ದೆ. ನಾನು ಕೇಳಿ ತಿಳಿದ ಮೇರೆಗೆ ಅಪಘಾತವು ಪುಟ್ಟಸ್ವಾಮಿಯವರ ತಪ್ಪಿನಿಂದಾದ ಅಪಘಾತ ಎಂದರೆ ಅವರೇ ಬಂದು ಗುದ್ದಿದ್ದರು ಎಂದು ಸಾಕ್ಷಿ ನುಡಿಯುತ್ತಿದ್ದರು. ಅಪಘಾತವಾದಾಗ ನನ್ನ ಗಂಡ ಮತ್ತು ಪುಟ್ಟಸ್ವಾಮಿ ಗುಂಡ್ಲುಪೇಟೆ ಕಡೆ ಹೋಗುತ್ತಿದ್ದರು. ಬುಲೆರೊ ವಾಹನ ಗುಂಡ್ಲುಪೇಟೆ ಕಡೆಯಿಂದ ಬರುತ್ತಿತ್ತು. ನಾನು ಹಾಜರು ಮಾಡಿದ ನಕ್ಷೆ ಪ್ರಕಾರ 40 ಅಡಿ ರಸ್ತೆಯಲ್ಲಿ ಸ್ಕೂಟರ್ ನವರೇ 33 ಅಡಿ ಬಲಭಾಗಕ್ಕೆ ಹೋಗಿ ಅಪಘಾತ ಮಾಡಿದ್ದರು ಎಂದು ಕಂಡು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಎದುರುದಾರರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ನಂಜನಗೂಡು.